


ವಿವೇಕನಗರ, ಅಗರ್ತಲಾ




ಶಿವನಹಳ್ಳಿ

## ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

ರಾಮಕೃಷ್ಣ ಮಹಾಸಂಘದ ಎಲ್ಲ ಕೇಂದ್ರಗಳಲ್ಲಿ ಡಿಸೆಂಬರ್ ೨೬ರಂದು **ಶ್ರೀಮಾತೆ ಶಾರದಾದೇವಿಯವರ ಜಯಂತಿಯನ್ನು** ಆಚರಿಸಲಾಯಿತು. **ಶಿವನಹಳ್ಳಿ** ಕೇಂದ್ರದಲ್ಲಿ ಸ್ವಾಮಿ ಪ್ರೇಮಾನಂದರ ಜಯಂತಿಯ ದಿನವಾದ ಡಿಸೆಂಬರ್ ೧೨ರಂದು ಹೆಣ್ಣುಮಕ್ಕಳ ಶಾಲೆಯ ಹೊಸ ಕಟ್ಟಡವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು. ತ್ರಿಪುರಾದ ಅಗರ್ತಲಾದಲ್ಲಿರುವ **ವಿವೇಕನಗರ** ಕೇಂದ್ರದ ದೇವಾಲಯದಲ್ಲಿ ಡಿಸೆಂಬರ್ ೧೨ರಂದು ಸ್ವಾಮಿ ಸುಹಿತಾನಂದಜಿಯವರು ದಿವ್ಯತ್ರಯರ ಹೊಸ ಭಾವಚಿತ್ರಗಳನ್ನು ಸ್ಥಾಪಿಸಿದರು. **ಗುವಾಹಟಿ** ಕೇಂದ್ರದ ಛತ್ರಿಬಾರಿ ಕ್ಯಾಂಪಸ್‌ನಲ್ಲಿ ಡಿಸೆಂಬರ್ ೧೩ರಂದು ಆಸ್ಪತ್ರೆಯ ಮೊದಲನೇ ಮಹಡಿಯ ಕಟ್ಟಡವನ್ನು ಉದ್ಘಾಟಿಸಲಾಯಿತು. **ಸರೀಷ** ಕೇಂದ್ರವು ಡಿಸೆಂಬರ್ ೨೫ರಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ತನ್ನ ಶತಮಾನೋತ್ಸವವನ್ನು ಆಚರಿಸಿತು. ಡಿಸೆಂಬರ್ ೩೦ರಂದು ಪರಮಪೂಜ್ಯ ಅಧ್ಯಕ್ಷ ಮಹಾರಾಜರು **ಸ್ವಾಮಿಜಿಯವರ ಪೂರ್ವಿಕರ ಮನೆಯ** ಸಭಾಂಗಣ ಸಂಕೀರ್ಣವನ್ನು ವರ್ಚುಅಲ್ ಆಗಿ ಉದ್ಘಾಟಿಸಿದರು; ಈ ಸಂದರ್ಭದಲ್ಲಿ ಅನೇಕ ಕಾರ್ಯಕ್ರಮಗಳೂ ನಡೆದವು. **ನಾರಾಯಣಪುರ** ಕೇಂದ್ರದ ಶಾಲೆಯ ಮಕ್ಕಳು ಭಾರತ ರಾಷ್ಟ್ರೀಯ ಕ್ರೀಡಾ ಸಮಿತಿಯು (SGFI) ನಡೆಸಿದ ವಿವಿಧ ಕ್ರೀಡಾಸ್ಪರ್ಧೆಗಳಲ್ಲಿ ಹಲವು ಪದಕಗಳನ್ನು ಪಡೆದಿದ್ದಾರೆ. ಬೇಲೂರಿನ **ಶಾರದಾಪೀಠದ** ವಿದ್ಯಾಮಂದಿರ ಕಾಲೇಜು NAAC ನೀಡುವ A++ ಅತ್ಯುನ್ನತ ದರ್ಜೆಯನ್ನು ಮುಂದಿನ ೫ ವರ್ಷಗಳಿಗೆ ಪಡೆದಿದೆ.

## ಮಂಗಳೂರು ರಾಮಕೃಷ್ಣ ಮಠಕ್ಕೆ 'ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ'



ಕರ್ನಾಟಕ ಸರ್ಕಾರವು ಪ್ರತಿವರ್ಷವೂ ರಾಜ್ಯೋತ್ಸವ ಸಂದರ್ಭದಲ್ಲಿ ವಿವಿಧ ವ್ಯಕ್ತಿಗಳಿಗೆ ಹಾಗೂ ಸಂಸ್ಥೆಗಳಿಗೆ 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸುತ್ತದೆ. ಈ ಬಾರಿ ಭಾರತದ ಸ್ವಾತಂತ್ರ್ಯೋತ್ಸವದ ೭೫ನೇ ವರ್ಷಾಚರಣೆಯೂ ಆಗಿರುವುದು ವಿಶೇಷ. ಈ ಬಾರಿ **'ಅಮೃತ ಮಹೋತ್ಸವ ರಾಜ್ಯಪ್ರಶಸ್ತಿ'**ಯನ್ನು ೧೦ ಸಂಸ್ಥೆಗಳಿಗೆ ನೀಡಿದ್ದು, ಮಂಗಳೂರು ರಾಮಕೃಷ್ಣ ಮಠವು ಇದರಲ್ಲಿ ಸೇರಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ಮಠವು ೨೦೧೫ರಿಂದ ೨೦೧೯ರ ವರೆಗೆ 'ಸ್ವಚ್ಛ ಭಾರತ ಅಭಿಯಾನ'ದಲ್ಲಿ ಸಕ್ರಿಯವಾಗಿ ದುಡಿಯುತ್ತ ಬಂದಿದೆ.

೨೦೨೧ರ ನವೆಂಬರ್ ೧ ರಂದು ನಡೆದ ವಿಶೇಷ ಕಾರ್ಯಕ್ರಮದಲ್ಲಿ ೬೬ ವ್ಯಕ್ತಿಗಳಿಗೆ ಹಾಗೂ ೧೦ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದ್ದು, ಸನ್ಮಾನ್ಯ ಮುಖ್ಯಮಂತ್ರಿಯವರ ಹಾಗೂ ಇತರ ಮಂತ್ರಿಗಳ ಉಪಸ್ಥಿತಿಯಲ್ಲಿ ಮಂಗಳೂರು ರಾಮಕೃಷ್ಣ ಮಠದ ಪರವಾಗಿ ಸ್ವಾಮಿ ಏಕಗಮ್ಯಾನಂಜಿಯವರು ಪ್ರಶಸ್ತಿಯನ್ನು ಸ್ವೀಕರಿಸಿದರು. ಮಠದ ಭಕ್ತರು, ಸ್ವಯಂಸೇವಕರು ಹಾಗೂ ಹಿತೈಷಿಗಳು ಇದಕ್ಕೆ ಪ್ರತಿಸ್ಪಂದಿಸಿ, ತಮ್ಮ ಸಂತಸವನ್ನು ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಕಳೆದ ೫ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ **'ಸ್ವಚ್ಛ ಭಾರತ ಅಭಿಯಾನ'** ಹಾಗೂ ಇತರ ಸೇವಾಕಾರ್ಯಗಳಲ್ಲಿ ನೆರವಾದ ಎಲ್ಲ ವ್ಯಕ್ತಿಗಳಿಗೆ ಹಾಗೂ ಸಂಘ, ಸಂಸ್ಥೆಗಳಿಗೆ ಮಠವು ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತಿದೆ.



Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020